158	ಶಿರಹಟ್ಟಿ	89
	ಹಾವೇರಿ	
159	ಬ್ಯಾಡಗಿ	116
160	ಹಾವೇರಿ	122
161	ಹನಗಲ್	54
162	ಹಿರಿಕೆರೂರು	102
163	ರಾಣಿಬೆನ್ನೂರು	114
164	ಸವಣೂರು	81
165	ಶಿಗ್ಗಾಂವ	40
	ಉತ್ತರ ಕನ್ನಡ	
166	ಅಂಕೋಲ	11
167	ಭಟ್ಕಳ್	0
168	ಹಳಿಯಾಳ	3
169	ಹೊನ್ನಾವರ	0
170	ಕಾರವಾರ	3
171	ಕುಮುಟಾ	0
172	ಮುಂಡಗೋಡ	1
173	ಸಿದ್ದಾಪುರ	0
174	ಶಿರ್ಸಿ	1
175	ಬೋಯಿಡಾ	0
176	ಯಲ್ಲಾಪುರ	0
	ರಾಜ್ಯದ ಒಟ್ಟು	14523

2347 (2821) – ಶ್ರೀ ನಿರಾಣಿ ಮುರುಗೇಶ ರುದ್ರಪ್ಪ (ಬೀಳಗಿ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವವರೇ ?

1) ಬಾಗಲಕೋಟೆ ಜಿಲ್ಲೆಯ ರೂ. 638 ಕೋಟಿ ಪ್ಯಾಕೇಜ್‌ಗಳಲ್ಲಿ ತಾಲ್ಲೂಕು ಮತ್ತು ಗ್ರಾಮೀಣ ಪ್ರದೇಶ ಸೇರಿದೆಯೇ ;

2) ಪಟ್ಟಣಕ್ಕೆ ಸಿಗುವ ಪರಿಹಾರ ಸೌಲಭ್ಯಗಳು ಆಲಮಟ್ಟಿ ಹಿನ್ನೀರಿನಿಂದ ಮುಳುಗಡೆಯಾದ ಗ್ರಾಮೀಣ ಪ್ರದೇಶದ ಸಂತ್ರಸ್ಥರಿಗೆ ಸಿಗದೇ ಇರಲು ಕಾರಣ ಏನು ?

3) ಬೀಳಗಿ ವಿಧಾನ ಸಭಾ ಕ್ಷೇತ್ರದಲ್ಲಿ 5 ಹಳ್ಳಿಗಳಾದ ಕುಂದರಗಿ, ಬಾವಲತ್ತಿ, ಗಿರಿನಾಗರ, ಸನಾಳ, ಮತ್ತು ಹೀರೆ ಪಡಸಲಗಿಹೆ ಎಲ್ಲಿಯವರೆಗೆ ಪರಿಹಾರ ಸಿಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

4) ಹಾಗಿದ್ದಲ್ಲಿ ಪರಿಹಾರ ಯಾವಾಗ ಕೊಡಲಾಗುವುದು ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)–

1) ಹೌದು.

2) ಗಾಮೀಣ ಜೀವನಕ್ಕೂ ನಗರ ಪ್ರದೇಶ ಜೀವನಕ್ಕೂ ವ್ಯತ್ಯಾಸವಿರುವುದರಿಂದ ಪರಿಹಾರ ಸೌಲಭ್ಯಗಳಲ್ಲಿ ವ್ಯತ್ಯಾಸವಿದೆ.

3) ಬಂದಿದೆ. ಆಲಮಟ್ಟಿ ಜಲಾಶಯದ ಮಟ್ಟ FRL 519.60 ಮೀಟರ್ ವರೆಗೆ ಸಂಗ್ರಹಿಸಿದ ನೀರಿನಿಂದ ಈ 5 ಗ್ರಾಮಗಳು ಮುಳುಗಡೆ ಯಾಗಿರುವುದಿಲ್ಲ. RL 521 ಮೀ ಮಟ್ಟದವರೆಗೆ ಮುಳುಗದೇಯಲ್ಲಿ ಬರುವ ಗ್ರಾಮೀಣ ಪ್ರದೇಶದ ಕಟ್ಟಡಗಳನ್ನು ಸ್ವಾಧೀನ ಪಡಿಸಿಕೊಂಡು ಪರಿಹಾರ ನೀಡಲಾಗಿದೆ. ಆದರೆ ಸದರಿ RL 521 ಮೀ ಅಡಿಯಲ್ಲೂ ಸಹ ಈ 5 ಗ್ರಾಮಗಳು ಮುಳುಗಡೆ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದ್ದರಿಂದ ಸದರಿ ಗ್ರಾಮದವರಿಗೆ ಪರಿಹಾರ ಕೊಡುವ ಪ್ರಮೇಯ ಬರುವುದಿಲ್ಲ.

4) ಉದ್ಭವಿಸುವುದಿಲ್ಲ.

2394 (3209): ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಗೇವಾಡಿ)– ಮಾನ್ಯ ಕೃಷಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಡೋಣಿ ನದಿ ಹರಿಯುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಇದೆಯೇ ;

ಆ) ಡೋಣಿ ನದಿ ಹೂಳೆತ್ತುವ ಪೈಲೆಟ್ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು;

ಇ) ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಈ ಯೋಜನೆಯ ಅನುಷ್ಠಾನಕ್ಕೆ ನೀಡಿದ ಅನುದಾನ ಎಷ್ಟು ;

ಈ) ಡೋಣಿ ನದಿ ಹೂಳೆತ್ತುವ ಕಾಮಗಾರಿ ಈಗ ಯಾವ ಹಂತದಲ್ಲಿದೆ;

ಉ) ಡೋಣಿ ನದಿ ಹೂಳೆತ್ತುವ ಪೈಲೆಟ್ ಯೋಜನೆಯನ್ನು ಯಾವ ಇಲಾಖೆಯವರು ನಿಭಾಯಿಸುತ್ತಿದ್ದಾರೆ ;